**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 258/2015**

| | | |
|---|---|---|
| ಸಾಕ್ಷಿದಾರರ ಹೆಸರು | **ಜಗದೀಶ** | **ಪ್ರಾಸಾಃ 06** |
| ತಂದೆಯ/ಗಂಡನ ಹೆಸರು | ಪುಟ್ಟಬಸಪ್ಪ | **ಚಾಸಾಃ 09** |
| ವಯಸ್ಸು | 44 ವರ್ಷ | |
| ಕೆಲಸ | ಪೋಲಿಸ್ ಇನ್ಸ್‌ಪೆಕ್ಟರ್, ಮಲೇಮಹದೇಶ್ವರಬೆಟ್ಟ ಪೊಲೀಸ್ ಠಾಣೆ | ದಿಃ 06.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ | ಮಲೇಮಹದೇಶ್ವರಬೆಟ್ಟ | |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ನಾನು ದಿಃ 03.01.2014 ರಿಂದ 31.03.2014 ರವರೆಗೆ ಮೈಸೂರು ದಕ್ಷಿಣ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 08.01.2014 ರಂದು ಸಂಜೆ 7.30 ಗಂಟೆಗೆ ನಾನು ಠಾಣಾ ಉಸ್ತುವಾರಿಯಲ್ಲಿರುವಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಹೊಂದಿಕೊಂಡು ಠಾಣಾ ಮೊಕದ್ದಮೆ ಸಂಖ್ಯೆ 05/2014 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವ ವನ್ನು ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ಹಾಗೂ ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

ನಂತರ ದಿಃ 09.01.2014 ರಂದು ಈ ಪ್ರಕರಣದ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ 1 ರವರು ಕೃತ್ಯ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಚಾಸಾ 3 ಮತ್ತು 4 ರವರ ಸಮಕ್ಷಮ ಬೆಳಿಗ್ಗೆ 11.30 ರಿಂದ 12.15 ಗಂಟೆಯಲ್ಲಿ ಸ್ಥಳ ಮಹಜರ್ ಕ್ರಮವನ್ನು ಜರುಗಿಸಿರುತ್ತೇನೆ.

ನಂತರ ಈ ಪ್ರಕರಣದ ಕೃತ್ಯ ಸ್ಥಳವು ಬದನವಾಳು ಪೊಲೀಸ್ ಠಾಣೆಯ ವ್ಯಾಪ್ತಿಗೆ ಒಳಪಡುವುದರಿಂದ ನ್ಯಾಯಾಲಯದ ಅನುಮತಿ ಮೇರೆಗೆ ದಿಃ 14.01.2014 ರಂದು ಈ ಪ್ರಕರಣವನ್ನು ವರ್ಗಾವಣೆ ಮಾಡಿರುತ್ತೇನೆ.

ಸಾಕ್ಷಿ ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ. 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿ ಸ್ಥಳ ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ. 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 2(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಆರ್. ವಕೀಲರಿಂದಃ**

ಈ ಪ್ರಕರಣಕ್ಕೂ ಹಾಗೂ ಆರೋಪಿಗೆ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಪಿರ್ಯಾದಿಯ ಮಾತಿನಂತೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 2 ಅನ್ನು ಠಾಣೆಯಲ್ಲೇ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಪಿರ್ಯಾದಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ.ಹೇ.ಕೇ.ಸ.ಇದೆ.ಎಂ.ಒ**

1 **ನೇ ಹೆಚ್ಚುವರಿ ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಲಯ, ನಂಜನಗೂಡು**